ಶ್ರೀ ಸಿ. ಎಂ. ಉದಾಸಿ : Plant ಇದ್ದವರಿಗೆ ನಾವು ಕೊಟ್ಟು ತೆಗೆದುಕೊಡಿರುವಂಥದ್ದನ್ನು ನೋಡಿ. ಈಗ 1 ಸಾವಿರ ಟನ್ capacity plant ಇದ್ದವರು ತೆಗೆದುಕೊಂಡು 5 ಸಾವಿರ ಟನ್ ಮೇಲೆ extract ಮಾಡುತ್ತಿದ್ದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ಆ Condition ಅದರಲ್ಲಿರುವಾಗ ಬೇರೆಯದಕ್ಕೆ ಉಪಯೋಗ ಮಾಡುವುದಿಲ್ಲವೆನ್ನುವ ಷರತ್ತಿದೆ ಎನ್ನುವುದನ್ನು ನಾನು ಓದುತ್ತಿದ್ದೇನೆ. ಇದರಲ್ಲಿ specific ಆಗಿ ಇದೆ. "The Minerals as raw material in such a plant" ಎಂದು ಇದೆ. ಆ ರೀತಿ ನಿರ್ಬಂಧ ಇದೆ.

ಶ್ರೀ ಟಿ. ಬಿ. ಜಯಚಂದ್ರ : ಅನಧಿಕೃತವಾಗಿ ಲೂಟಿಯಾಗುತ್ತಿರುವ ಬಗ್ಗೆ, false permit ನಲ್ಲಿ ಸಾಗಣೆ ಆಗುತ್ತಿರುವ ಬಗ್ಗೆ ನೀವು ಹೇಳಲಿಲ್ಲ.

ಶ್ರೀ ಸಿ. ಎಂ. ಉದಾಸಿ : ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿರುವುದರ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಇಲಾಖೆಗೆ ಸೂಚನೆ ಕೊಡುತ್ತಿದ್ದೇವೆನ್ನುವ ಮಾತನ್ನು ನಾನು ಆಗಲೇ ಹೇಳಿದೆ.

ರಾಜ್ಯ ಹೆದ್ದಾರಿಗಳ ದುಸ್ಥಿತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 18 : (60)

ಮಾನ್ಯ ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)

ಉತ್ತರಿಸುವ ಸಚಿವರು : ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
1.	ಮಾಗಡಿ-ಗುಡೆಮಾರನಹಳ್ಳಿ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿ - 3 ಹಾಗೂ ಮಾಗಡಿ ತಾಲ್ಲೂಕಿನ ಕಲ್ಯಾ - ಶ್ರೀಪತಿಹಳ್ಳಿ - ಸಾತನೂರು ರಾಜ್ಯ ಹೆದ್ದಾರಿ - 94 ಇವುಗಳು ಪ್ರಯಾಣ ಮಾಡಲಾಗದಷ್ಟು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು.
2.	ಇವುಗಳ ದುರಸ್ತಿಗಾಗಿ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?	ಈ ರಸ್ತೆಗಳನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲು ಈ ಕೆಳ ಕಂಡಂತೆ ಕ್ರಮ ತೆಗೆದುಕೊಳ್ಳಲಾಗಿದೆ. 1. ಮಾಗಡಿ - ಗುಡೆಮಾರನಹಳ್ಳಿ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿ-3 :

		1. 2007-08ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ ವತಿಯಿಂದ ಸದರಿ ರಸ್ತೆಯ ಸರಪಳಿ 82.67 ರಿಂದ 93.50 ಕಿ.ಮೀ.ವರೆಗೆ ಅಂದರೆ 10.83ಕಿ.ಮೀ. ಉದ್ದಕ್ಕೆ 3.75 ಮೀಟರ್ ಅಗಲದಿಂದ 7.00 ಮೀಟರ್ ಅಗಲಕ್ಕೆ ಅಗಲೀಕರಣ ಮತ್ತು ಡಾಂಬರೀಕರಣ ಕೆಲಸವನ್ನು ರೂ.400.00 ಲಕ್ಷ ವೆಚ್ಚದಲ್ಲಿ ನಿರ್ವಹಿಸಲಾಗಿದೆ. 2. ಈ ರಸ್ತೆಯ ಸರಪಳಿ 101.50 ರಿಂದ 105.00 ಕಿಮೀ.ವರೆಗೆ ಅಂದರೆ 3.50 ಕಿ.ಮೀ. ಉದ್ದಕ್ಕೆ ರೂ.20.00 ಲಕ್ಷ ವೊತ್ತದಲ್ಲಿ ಮರು ಡಾಂಬರೀಕರಣವನ್ನು ಮಾಡಲಾಗಿದೆ. 3. 3 ವರ್ಷಗಳ ರಾಜ್ಯ ಹೆದ್ದಾರಿ 2005-08 ಸಾಲಿನ ನಿರ್ವಹಣೆಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕಾಮಗಾರಿಗಳನ್ನು ಮಾಡಲಾಗುತ್ತಿದೆ. **2. ಕಲ್ಯಾ - ಶ್ರೀಪತಿಹಳ್ಳಿ - ಸಾತನೂರು ರಸ್ತೆ ರಾಜ್ಯ ಹೆದ್ದಾರಿ - 94 :** ಈ ಭಾಗದ ರಸ್ತೆಯನ್ನು 3 ವರ್ಷಗಳ (2005-08) ರಾಜ್ಯ ಹೆದ್ದಾರಿ ನಿರ್ವಹಣೆಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕಾಮಗಾರಿಗಳನ್ನು ಮಾಡಲಾಗಿದ್ದು, ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿ, ವಾಹನಗಳ ಸಾಮಾನ್ಯ ಸಂಚಾರಕ್ಕೆ ಅನುವು ಮಾಡಲಾಗಿದೆ.
3.	ಎಷ್ಟು ದಿನಗಳಲ್ಲಿ ಈ ರಸ್ತೆಗಳನ್ನು ದುರಸ್ತಿಪಡಿಸಲಾಗುವುದು?	ಅನುದಾನದ ಲಭ್ಯತೆಯನ್ನಾಧರಿಸಿ, ಈ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾಗಡಿ - ಗುಡೆಮಾರನಹಳ್ಳಿ, ಶ್ರೀಪತಿಹಳ್ಳಿ - ಕಲ್ಯಾ ರಸ್ತೆಗಳು ಹಾಳಾಗಿವೆ ಎನ್ನುವ ವಿಚಾರವನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ, ಮಾಗಡಿ - ಗುಡೆಮಾರನಹಳ್ಳಿ ರಸ್ತೆಯಲ್ಲಿ ಸರಪಳಿ 82.67 ರಿಂದ 93.50 ಕಿ.ಮೀ.ವರೆಗೆ ಅಂದರೆ 10.83 ಕಿ.ಮೀ. ಉದ್ದ ರಸ್ತೆ ಮಾಡಿದ್ದೇವೆ, ಮತ್ತೆ ಸರಪಳಿ 101.50 ರಿಂದ 105.00 ಕಿ.ಮೀ.ವರೆಗೆ ರಸ್ತೆ ಮಾಡಿದ್ದೇವೆಂದು ಹೇಳಿದ್ದಾರೆ. ಮಧ್ಯೆ ಇರುವ ಗ್ಯಾಪ್ ರಸ್ತೆ ಎಷ್ಟು ಹಾಳಾಗಿದೆ ಎನ್ನುವ ಬಗ್ಗೆ ನಾನು with photo ತಮ್ಮ ಗಮನಕ್ಕೆ ತಂದಿದ್ದೇನೆ. ಇಲ್ಲಿ ಪ್ರಶ್ನೆ ಏನೆಂದರೆ, ಇದು ಕಳೆದ ಬಾರಿ K-SHIP ನಲ್ಲಿ ಸೇರಿತ್ತು. ಆದರೆ, ಹಿಂದಿನ ಸರ್ಕಾರ ಅಲ್ಲಿ outer ring road ಮಾಡಬೇಕೆಂದು ತೀರ್ಮಾನ ಮಾಡಿತ್ತು. outer ring road ಮಾಡುತ್ತೀರೋ ಅಥವಾ K-SHIP ನಲ್ಲಿ ಇದನ್ನು ತೆಗೆದುಕೊಳ್ಳುತ್ತೀರೋ? ಎನ್ನುವುದನ್ನು ದಯಮಾಡಿ ತಿಳಿಸಬೇಕು. ಹಾಗೆಯೇ, ಶ್ರೀಪತಿಹಳ್ಳಿ ರಸ್ತೆಯ ವಿಚಾರದಲ್ಲಿ ನೀವು ಅನುದಾನದ ಲಭ್ಯತೆಯ ಮೇಲೆ ಎಂದು ಹೇಳಿದ್ದೀರಿ. ಆ ರಸ್ತೆ ಬಹಳಷ್ಟು ಕೆಟ್ಟಿದೆ. ಅನುದಾನದ ಲಭ್ಯತೆಯಲ್ಲಿ ಈ ವರ್ಷವೇ ಅದನ್ನು ಕ್ಲೀಯರ್ ಮಾಡುತ್ತೀರೋ ಅಥವಾ ಮುಂದಿನ ವರ್ಷ ತೆಗೆದುಕೊಳ್ಳುತ್ತೀರೋ? ಎಂಬ ಬಗ್ಗೆ ದಯಮಾಡಿ ಸ್ಪಷ್ಟೀಕರಣ ನೀಡಬೇಕು.

ಶ್ರೀ ಸಿ. ಎಂ. ಉದಾಸಿ : ಮಾನ್ಯ ಸದಸ್ಯರು ಹೇಳಿದಹಾಗೆ, ಅದು K-SHIP ನಲ್ಲಿ ಹಿಂದೆ ಸೇರಿತ್ತು, ring road ಮಾಡುವ ಸಲುವಾಗಿ ಪರಿವರ್ತನೆ ಮಾಡಿದ್ದೀರಿ ಎನ್ನುವ ಮಾತನ್ನು ಹೇಳಿದ್ದೀರಿ. ನಾನು ಇಲಾಖಾಧಿಕಾರಿಗಳ ಜೊತೆ ಚರ್ಚಿಸಿ, ತಮ್ಮನ್ನೂ ಕರೆದು ಇದಕ್ಕೊಂದು ಪರಿಹಾರವನ್ನು ಕಂಡುಹಿಡಿಯುತ್ತೇನೆ. ದಯವಿಟ್ಟು ಸಹಕರಿಸಬೇಕು.

ಶ್ರೀ ಹೆಚ್. ಸಿ. ಬಾಲಕೃಷ್ಣ : ಶ್ರೀಪತಿಹಳ್ಳಿ ರಸ್ತೆ ತುಂಬಾ ಕೆಟ್ಟಿದೆ. ಈಗಾಗಲೇ ನಾನು ಆ ಬಗ್ಗೆ photo ಸಹಿತ ಕೊಟ್ಟಿದ್ದೇನೆ.